UASB Library
Newspaper Clippings
Monday 26-12-2022 Pg .1
Jai Kisan

ಪಿಎಂ ಕುಸುಮ್‌ಗೆ ಪ್ರಧಾನಿ ಮೋದಿ ಚಾಲನೆ?

ಒಂದು ಲಕ್ಷ ರೈತರ ಸಮಕ್ಷಮ ಚಾಲನೆ ಉದ್ದೇಶ | ಪಂಪ್‌ಸೆಟ್‌ಗಳಿಗೆ ಗ್ರೀನ್‌ ಎನರ್ಜಿ ಸಂಪರ್ಕ

■ ವಿಜಯವಾಣಿ ಸುದ್ದಿಜಾಲ ಬೆಳಗಾವಿ

ನೀರಾವರಿ ಪಂಪ್ ಸೆಟ್‌ಗಳಿಗೆ ಸೌರ ವಿದ್ಯುತ್ ಪೂರೈಸುವ 'ಪ್ರಧಾನಮಂತ್ರಿ ಕಿಸಾನ್ ಊರ್ಜಾ ಸುರಕ್ಷಾ ಏವಂ ಉತ್ಥಾನ (ಪಿಎಂ ಕುಸುಮ್-ಸಿ) ಯೋಜನೆ' ಮೊದಲ ಹಂತದ ಕಾಮಗಾರಿಗೆ ಪ್ರಧಾನಿ ನರೇಂದ್ರ ಮೋದಿ ಅವರಿಂದ ಚಾಲನೆ ನೀಡಲು ಸರ್ಕಾರ ಬಯಸಿದ್ದು, ಒಂದು ಲಕ್ಷ ಫಲಾನುಭವಿ ರೈತರನ್ನು ಸೇರಿಸುವ ಚಿಂತನೆ ನಡೆಸಿದೆ. ಪಿಎಂ ಕುಸುಮ್ ಎ, ಬಿ, ಸಿ ವಿಭಾಗಗಳನ್ನು ಅನುಷ್ಠಾನಕ್ಕೆ ತರಲಾಗಿದೆ. 'ಎ' ಯಡಿ ವಿದ್ಯುತ್ ಉತ್ಪಾದನೆಗೆ ರೈತರ ಸಹಕಾರ ಸಂಘಗಳು, ಡೆವಲಪರ್‌ಗಳಿಗೆ ಸಬ್ಸಿಡಿ ನೆರವು ಲಭಿಸಲಿದೆ. 'ಬಿ' ಯಡಿ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳಿಗೆ ಸೌರಫಲಕ ಅಳವಡಿಸಿಕೊಳ್ಳಲು ರೈತರಿಗೆ ಆರ್ಥಿಕ, ಪರಿಕರಗಳ ಸಹಾಯ ಸಿಗಲಿದ್ದು, ಹೆಚ್ಚುವರಿ ವಿದ್ಯುತ್ ಮಾರಾಟ ಮಾಡಿ ಆದಾಯ ಮಾಡಿಕೊಳ್ಳಬಹುದಾಗಿದೆ. ಹೊಸದಾಗಿ ಬಾವಿ/ ಕೊಳವೆ ಬಾವಿ ಕೊರೆದು ಪಂಪ್‌ಸೆಟ್ ಅಳವಡಿಸಿರುವ ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಸಿ ಕಂಪೋನೆಂಟ್ ಅಡಿ ಕೃಷಿ ಪಂಪ್‌ಸೆಟ್ ಫೀಡರ್‌ಗಳಿಗೆ ಸೌರ ವಿದ್ಯುತ್ ಪೂರೈಸಬೇಕಾಗಿದ್ದು, ಆಯಾ ಉಪ ಕೇಂದ್ರಗಳ ಸಮೀಪವೇ ಸೌರ ಘಟಕಗಳ ಸ್ಥಾಪಿಸಬೇಕಾಗಿದ್ದು, ಇಂಧನ ಸೇವಾ ಕಂಪನಿ ಮಾದರಿಯಡಿ ಹೂಡಿಕೆದಾರರ ಮೂಲಕ ಯೋಜನೆ ಅನುಷ್ಠಾನಕ್ಕೆ ತರಲಾಗುತ್ತಿದೆ. ಈಗಾಗಲೆ ಶುರುವಾಗಿರುವ ಟೆಂಡರ್ ಪ್ರಕ್ರಿಯೆ ತಿಂಗಳಾಂತ್ಯಕ್ಕೆ ಪೂರ್ಣಗೊಳ್ಳಲಿದ್ದು, ಮುಂದಿನ ವರ್ಷದ ಅಂತ್ಯದೊಳಗೆ ಆಯಾ ಫೀಡರ್‌ಗೆ ಸೌರ ಮೂಲದಿಂದ ಉತ್ಪಾದಿಸುವ ವಿದ್ಯುತ್ ಒದಗಿಸಲು ಯೋಜಿಸಿದೆ.ಕೃಷಿ ಪಂಪ್‌ಸೆಟ್‌ಗಳಿಗೆ ಪರಿಸರ ಸ್ನೇಹಿ ಹಸಿರು ವಿದ್ಯುತ್ ಸಂಪರ್ಕ, ರೈತರ ಬೇಡಿಕೆಯಂತೆ ಹಗಲು ಹೊತ್ತಿನಲ್ಲಿ ಉತ್ತಮ ಗುಣಮಟ್ಟದ ವಿದ್ಯುತ್ ನಿರಂತರವಾಗಿ ಏಳು ತಾಸು ಪೂರೈಸುವುದು 'ಸೌರ ವಿದ್ಯುದೀಕರಣ'ದ ತಿರುಳು.

ಹಂಚಿಕೆ: ಯೋಜನೆಯಡಿ ಬೆಸ್ಕಾಂ 1.75 ಲಕ್ಷ, ಹೆಸ್ಕಾಂ- 65 ಸಾವಿರ ಹಾಗೂ ಸೆಸ್ಕ್-10 ಸಾವಿರ ಸೇರಿ ಒಟ್ಟು 2.50 ಲಕ್ಷ ನೀರಾವರಿ ಪಂಪ್‌ಸೆಟ್‌ಗಳನ್ನು ಹಂಚಿಕೆ ಮಾಡಿದ್ದು, ಇಷ್ಟು ಪಂಪ್‌ಸೆಟ್‌ಗಳಿಗೆ 941 ಮೆಗಾ ವಾಟ್ ಸೌರ ಶಕ್ತಿ ವಿದ್ಯುತ್ ಬೇಕಾಗುತ್ತದೆ ಎಂದು ಇಂಧನ ಇಲಾಖೆ ಮೂಲಗಳು ತಿಳಿಸಿವೆ. ಕೆಪಿಟಿಸಿಎಲ್ ತಾಂತ್ರಿಕ ಕಾರ್ಯಸಾಧ್ಯತೆ ವರದಿ ಪ್ರಕಾರ 196 ಉಪಕೇಂದ್ರಗಳು ಹಾಗೂ 579 ಫೀಡರ್‌ಗಳ ವ್ಯಾಪ್ತಿಯಲ್ಲಿ 2.50ಲಕ್ಷ ಪಂಪ್‌ಸೆಟ್‌ಗಳಿವೆ. ಆಸಕ್ತ ಬಿಡ್‌ದಾರರು ಉಪ ಕೇಂದ್ರಗಳ ಬಳಿಯೇ ಸೌರ ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಬೇಕಾಗುತ್ತದೆ. ಇದಕ್ಕಾಗಿ ಸಬ್ ಸ್ಟೇಷನ್ ಹತ್ತಿರವೇ ಅಗತ್ಯ ಜಮೀನನ್ನು ಸ್ವಂತ ವೆಚ್ಚದಲ್ಲಿ ಖರೀದಿ ಅಥವಾ ಗುತ್ತಿಗೆ ಆಧಾರದಲ್ಲಿ ಪಡೆಯಲು ಅವಕಾಶವಿದೆ.

ತಪ್ಪಲಿದೆ ಹೊರೆ

ಪಿಎಂ ಕುಸುಮ್- ಸಿ ಯಡಿ ಮೊದಲ ಹಂತದಲ್ಲಿ 10 ಎಚ್‌ಪಿವರೆಗಿನ 2.50 ಲಕ್ಷ ಐ.ಪಿ. ಸೆಟ್‌ಗಳಿಗೆ ಹಸಿರು ಇಂಧನ ಪೂರೈಸುವ ಗುರಿಯಿಟ್ಟುಕೊಂಡಿದ್ದು, ಆಮಟ್ಟಿಗೆ ಉಚಿತ ವಿದ್ಯುತ್ ಪೂರೈಕೆಗೆ ಭರಿಸಲಿರುವ ಸಹಾಯಧನದ ಹೊರೆ ಬೊಕ್ಕಸಕ್ಕೆ ತಗ್ಗಲಿದೆ. ರಾಜ್ಯದಲ್ಲಿ 10 ಎಚ್‌ಪಿವರೆಗಿನ 33.15 ಲಕ್ಷ ನೀರಾವರಿ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಸಲೆಂದು ವಿದ್ಯುತ್ ಸರಬರಾಜು ಕಂಪನಿಗಳಿಗೆ ಪ್ರಸಕ್ತ ವರ್ಷ ಸರ್ಕಾರ ತುಂಬಿಕೊಡಬೇಕಾದ ಸಹಾಯಧನದ ಮೊತ್ತವನ್ನು 13,019 ಕೋಟಿ ರೂ.ಗಳೆಂದು ಕರ್ನಾಟಕ ವಿದ್ಯುತ್ ನಿಯಂತ್ರಣ ಪ್ರಾಧಿಕಾರ (ಕೆಇಆರ್ ಸಿ) ಅಂದಾಜಿಸಿದೆ.

ಪರಿಸರ ಸ್ನೇಹಿ ಹಸಿರು ಇಂಧನ ಉತ್ಪಾದನೆಗೆ ಉತ್ತೇಜನ ಭಾಗವಾಗಿ ನೀರಾವರಿ ಪಂಪ್‌ಸೆಟ್‌ಗಳಿಗೆ ಸೌರ ವಿದ್ಯುತ್ ಪೂರೈಸಲು ಪಿಎಂ ಕುಸುಮ್- ಸಿ ಯಡಿ ಸಿದ್ಧತೆಗಳು ನಡೆದಿದ್ದು, ಉದ್ಘಾಟನೆಗೆ ಪ್ರಧಾನಿ ಮೋದಿಯವರನ್ನು ಆಹ್ವಾನಿಸಲು ಪ್ರಯತ್ನಿಸಲಾಗುತ್ತಿದೆ.

| ವಿ.ಸುನಿಲ್ ಕುಮಾರ್ ಸಚಿವ.

26-12-2022
Vijayavani Pg 09

26-12-2022
Kannadaprbha
Pg 07

ಛತ್ತಿಸಗಢದ ಸರ್ಕಾರಿ ಕಚೇರಿಗಳಿಗೆ ಸಗಣಿ ಬಣ್ಣ

ಪರಿಸರ ಸ್ನೇಹಿ ಬಣ್ಣ ಬಳಕೆ ಆರಂಭಿಸಿದ ಸರ್ಕಾರ | ರೈತರಿಗೂ ಆದಾಯದ ಮೂಲ

ರಾಯ್‌ಪುರ: ಪರಿಸರ ಉಳಿಸುವಲ್ಲಿ ಕೊಡುಗೆ ನೀಡಲು ಛತ್ತೀಸ್‌ಗಢ ಸರ್ಕಾರ ವಿಭಿನ್ನ ಹಾಗೂ ಪರಿಸರ ಸ್ನೇಹಿ ಪ್ರಯತ್ನವೊಂದನ್ನು ಮಾಡಿದೆ. ರಾಜ್ಯದ ಸರ್ಕಾರಿ ಕಟ್ಟಡಗಳಿಗೆ ಗೋವಿನ ಸಗಣಿಯಿಂದ ತಯಾರಿಸಿದ ಬಣ್ಣವನ್ನು ಬಳಸಲಾಗಿದೆ. ಕೇವಲ ಪರಿಸರವಷ್ಟೇ ಅಲ್ಲದೇ ಗ್ರಾಮೀಣ ಹಾಗೂ ಮಹಿಳೆಯರ ಆರ್ಥಿಕ ಅಭಿವೃದ್ಧಿಗೂ ಇದು ಚೇತನ ನೀಡಲಿದೆ. ಸಗಣಿ ಬಳಸಿ ತಯಾರಿಸಿದ ಬಣ್ಣದಲ್ಲಿ ಕೀಟನಾಶಕಗಳು ಇರುವುದರಿಂದ ವೈಜ್ಞಾನಿಕವಾಗಿಯೂ ಇದು ಸಹಾಯಮಾಡುತ್ತದೆ.

ರಾಯ್‌ಪುರ್ ಹಾಗೂ ಕನ್‌ಕೇರ್‌ನಲ್ಲಿ ಸಗಣಿ ಬಳಸಿ ಬಣ್ಣ ಉತ್ಪಾದಕ ಘಟಕಗಳನ್ನು ಸ್ಥಾಪಿಸಲಾಗಿದೆ. ಸಗಣಿಯಿಂದ ಬಣ್ಣ ತಯಾರಿಸಲು ತಂತ್ರಜ್ಞಾನ ವರ್ಗಾವಣೆ ಮತ್ತು ಖಾದಿ ಆಯೋಗದೊಂದಿಗೆ ಹಾಗೂ ಸಗಣಿಯಿಂದ ವಿದ್ಯುತ್ ಉತ್ಪಾದಿಸಲು ಭಾಭಾ ಆಟೋಮಿಕ್ ಸಂಶೋಧನಾ ಕೇಂದ್ರದೊಂದಿಗೆ ಒಪ್ಪಂದ ಮಾಡಿಕೊಂಡಿತ್ತು.

ಈ ಹೊಸ ಬಣ್ಣದಲ್ಲಿ ಕಾರ್ಬಾಕ್ಸಿಮೀಥೈಲ್ ಸೆಲ್ಯುಲೋಸ್ ಮುಖ್ಯ ಮೂಲ ವಸ್ತುವಾಗಿದೆ. ಪ್ರತಿ 100 ಕೆಜಿ ಗೋವಿನ ಸಗಣಿಯಲ್ಲಿ 10 ಕೆಜಿಯಷ್ಟು ಒಣ ಕಾರ್ಬಾಕ್ಸಿಮೀಥೈಲ್ ಸೆಲ್ಯುಲೋಸ್ ತಯಾರಿಸಿ ಅದರ ಮೂಲಕ ಬಣ್ಣವನ್ನು ಉತ್ಪಾದಿಸಲಾಗುತ್ತಿದೆ. ಒಟ್ಟಾರೆ ಬಣ್ಣದಲ್ಲಿ ಶೇ.30ರಷ್ಟು ಪಾಲು ಕಾರ್ಬಾಕ್ಸಿಮೀಥೈಲ್ ಸೆಲ್ಯುಲೋಸ್‌ನದ್ದಾಗಿರುತ್ತದೆ.



ಸಗಣಿ ಪೇಂಟ್ ಬಳಕೆ ಲಾಭ ಏನು?

ಬ್ಯಾಕ್ಟೀರಿಯಾ ತಡೆ, ಫಂಗಸ್ ತಡೆ ಅಂಶಗಳನ್ನು ಬಣ್ಣ ಹೊಂದಿದೆ. ವಿಷಪೂರಿತ ಅಲ್ಲ. ಪರಿಸರ ಸ್ನೇಹಿ. ಯಾವುದೇ ವಾಸನೆ ಇಲ್ಲ. ಡಿಸ್ಟಂಪರ್ ಮತ್ತು ಎಮಲ್ಷನ್‌ಗೆ ಹೋಲಿಸಿದರೆ ಅಗ್ಗ.

ಪರಿಸರ ಸ್ನೇಹಿ ಬಣ್ಣದ ಬೆಲೆ ಏಷ್ಟು?

ಡಿಸ್ಟಂಪರ್ ಮಾದರಿ ಬಣ್ಣಕ್ಕೆ ಪ್ರತಿ ಲೀ.ಗೆ 120 ರು. ಮತ್ತು ಎಮಲ್ಷನ್ ಮಾದರಿಗೆ 225 ರು. ದರ ನಿಗದಿಪಡಿಸಲಾಗಿದೆ. ಪ್ರತಿ ಲೀಟರ್ ಎಮ್ಯೂಲಶನ್ ಮತ್ತು ಡಿಸ್ಟೆಂಪಟರ್ ಮೇಲೆ 130ರಿಂದ 139 ರು. ಲಾಭವಾಗಲಿದೆ.

ರೈತರೇ ಜಾಗೃತರಾಗಿ | ಸರ್ಕಾರ ಗಡುವು ವಿಸ್ತರಿಸಿದ್ದರೂ ನೋಂದಣಿಗೆ ರೈತರ ನಿರಾಸಕ್ತಿ | ಸರ್ಕಾರವೇ 'ಅದಾಲತ್' ನಡೆಸಿ ಇ-ಕೆವೈಸಿ ಮಾಡಿಸಬೇಕು: ಆಗ್ರಹ

ಇ-ಕೆವೈಸಿ ಮಾಡಿಸದ 16 ಲಕ್ಷ ರೈತರಿಗಿಲ್ಲ 'ಸಮ್ಮಾನ್' ಹಣ?

• ಸಿದ್ದು ಚಿಕ್ಕಬಳ್ಳೇಕೆರೆ
ಕನ್ನಡಪ್ರಭ ವಾರ್ತೆ ಬೆಂಗಳೂರು

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ಇ-ಕೆವೈಸಿ ಮಾಡಿಸಲು ಹತ್ತಕ್ಕೂ ಅಧಿಕ ಬಾರಿ ಕೇಂದ್ರ ಸರ್ಕಾರ ಗಡುವು ವಿಸ್ತರಿಸುತ್ತಾ ಬಂದಿದ್ದರೂ ರಾಜ್ಯದ ರೈತರು ನಿರಾಸಕ್ತಿ ತೋರುತ್ತಿದ್ದಾರೆ. 16,89,402 ಅನ್ನದಾತರು ಇನ್ನೂ ಇ-ಕೆವೈಸಿ ಗೊಡವೆಗೇ ಹೋಗಿಲ್ಲ.

ರಾಜ್ಯದಲ್ಲಿ ಆಧಾರ್ ಆಧಾರಿತವಾಗಿ 53,91,573 ಲಕ್ಷ ರೈತರು ಪಿಎಂ ಕಿಸಾನ್ ಯೋಜನೆಯಡಿ ನೋಂದಾಯಿತರಾಗಿದ್ದು ಇದರಲ್ಲಿ ಸುಮಾರು 37 ಲಕ್ಷ ರೈತರಷ್ಟೇ ಇ-ಕೆವೈಸಿ ಮಾಡಿಸಿದ್ದಾರೆ. ಇನ್ನುಳಿದ 16,89,402 ರೈತರು ಇನ್ನೂ ಇ-ಕೆವೈಸಿ ಮಾಡಿಸುವುದು ಬಾಕಿ ಇದೆ. ಫಲಾನುಭವಿಗಳ ಸಂಖ್ಯೆಯನ್ನು ಪರಿಗಣಿಸಿದರೆ ಬೆಳಗಾವಿ ಜಿಲ್ಲೆಯಲ್ಲೇ ಇನ್ನೂ 1,26,970 ರೈತರು ಇನ್ನೂ ನೋಂದಣಿ ಮಾಡಿಸಿಲ್ಲ

ತುಮಕೂರು ಜಿಲ್ಲೆಯಲ್ಲಿ 97,860, ಕಲಬುರಗಿಯಲ್ಲಿ92,420, ವಿಜಯಪುರದಲ್ಲಿ 86,962, ಹಾಸನದಲ್ಲಿ83,667, ಬೆಂಗಳೂರು ಗ್ರಾಮಾಂತರದಲ್ಲಿ 82,977 ಬಳ್ಳಾರಿಯಲ್ಲಿ 73,522, ರಾಯಚೂರಿನಲ್ಲಿ69,521, ಉತ್ತರ ಕನ್ನಡದಲ್ಲಿ 58,305 ರೈತರು ಇ-ಕೆವೈಸಿ ಮಾಡಿಸಿಲ್ಲ.

ಬೆಂಗಳೂರು ನಗರದಲ್ಲಿ ಮಾತ್ರ ಅತಿ ಕಡಿಮೆ ಎಂದರೆ 12,482 ಫಲಾನುಭವಿಗಳು ಮಾತ್ರ ಇನ್ನೂ ನೋಂದಣಿ ಮಾಡಿಸಬೇಕಿದೆ.

ಅನರ್ಹರ ಪತ್ತೆಗೆ ಮುಂದಾದ ಕೇಂದ್ರ: ಅನರ್ಹರನ್ನು ಪತ್ತೆ ಹಚ್ಚಲೆಂದೇ ಕೇಂದ್ರ ಸರ್ಕಾರವು ಇ-ಕೆವೈಸಿ ಮಾಡಿಸುವುದನ್ನು ಕಡ್ಡಾಯಗೊಳಿಸಿದೆ.

ಪ್ರಾರಂಭದಲ್ಲಿ ತಾಂತ್ರಿಕ ತೊಂದರೆ ಉಂಟಾಗಿದ್ದರಿಂದ ನಾಲ್ಕೈದು ಬಾರಿ ಗಡುವು ವಿಸ್ತರಿಸಲಾಗಿತ್ತು. ಬಳಿಕ ರಾಜ್ಯಗಳ ಬೇಡಿಕೆ ಆಧಾರಿಸಿ ಐದಾರು ಸಲ ಅವಧಿ ನೀಡಲಾಗಿದ್ದರೂರಾಜ್ಯದರೈತರುಇ-ಕೆವೈಸಿಗೆ ಬಗ್ಗೆ ತಲೆ ಕೆಡಿಕೊಳ್ಳುತ್ತಿಲ್ಲ. ಇನ್ನೂ ಬೃಹತ್ ಸಂಖ್ಯೆಯಲ್ಲಿನೋಂದಣಿ ಮಾಡಿಸದೇ ದೂರ ಉಳಿದಿದ್ದಾರೆ.



- 53.91 ಲಕ್ಷ ರೈತರಲ್ಲಿ ಇ-ಕೆವೈಸಿ ಗೊಡವೆಗೆ ಹೋಗದ 16.89 ಲಕ್ಷ ಅನ್ನದಾತರು
- ಈ ರೈತರಿಗೆ ಇನ್ನು ಮುಂದೆ ಸಹಾಯಧನ ಬರುವುದು ಅನುಮಾನ
- ಬೆಳಗಾವಿ ಜಿಲ್ಲೆಯಲ್ಲೇ 1.26 ಲಕ್ಷ ರೈತರ ಇ-ಕೆವೈಸಿ ಬಾಕಿ
- ತುಮಕೂರು, ಕಲಬುರಗಿ, ವಿಜಯಪುರದಲ್ಲೂ ನೋಂದಣಿಯಿಂದ ದೂರ
- ಗ್ರಾಮ ಮಟ್ಟದಲ್ಲಿ ಕೃಷಿ ಇಲಾಖೆ ಅದಾಲತ್ ನಡೆಸಿದರೆ ಅನುಕೂಲ

ಯೋಜನೆಯಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೃಷಿ ಭೂಮಿ ಹೊಂದಿರುವ ಎಲ್ಲ ರೈತರಿಗೂ ವಾರ್ಷಿಕವಾಗಿ 10 ಸಾವಿರ ರು. ಸಹಾಯಧನ ನೀಡಲಿವೆ. ಮುಂದಿನ ಕಂತು ಬಿಡುಗಡೆಯಾಗುವುದರೊಳಗೆ ಬಾಕಿ ಇರುವ ಅರ್ಹ ರೈತರು ಇ-ಕೆವೈಸಿ ಮಾಡಿಸದಿದ್ದರೆ ಬ್ಯಾಂಕ್ ಖಾತೆಗೆನೇರವಾಗಿ ಜಮೆಯಾಗುತ್ತಿದ್ದ ಹಣಕ್ಕೆ ತಡೆ ಬೀಳಲಿದೆ.

ಗ್ರಾಮ ಮಟ್ಟದ ಅದಾಲತ್ ನಡೆಯಲಿ: ಅರ್ಹ ಫಲಾನುಭವಿಗಳನ್ನು ತಲುಪಲು ಇ-ಕೆವೈಸಿ ಸರಿಯಾದ ಕ್ರಮವಾಗಿದೆ. ಇ-ಕೆವೈಸಿ ಮಾಡಿಸುವಂತೆ ಸಾಕಷ್ಟು ಪ್ರಚಾರ ಮಾಡಿದ್ದರೂ ರೈತರು ಅಷ್ಟೊಂದು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಒಟಿಪಿ ಆಧಾರದಲ್ಲಿ ಮೊಬೈಲ್ ಮೂಲಕವೂ ಅಥವಾ ಸಮೀಪದ ರೈತ ಸಂಪರ್ಕ ಕೇಂದ್ರ ಅಥವಾ ಸಾಮಾನ್ಯ ಸೇವಾ ಕೇಂದ್ರಗಳಿಗೆ ತೆರಳಿ ಬಯೋ ಮೆಟ್ರಿಕ್ ಆಧಾರದಲ್ಲೂ ಇ-ಕೆವೈಸಿ ಮಾಡಿಸಬಹುದು.

ಆದರೆ ಲಕ್ಷಾಂತರ ರೈತರು ಇದರ ಗೊಡವೆಗೆ ಹೋಗುತ್ತಿಲ್ಲ. ಆದ್ದರಿಂದ ಕೃಷಿ ಇಲಾಖೆಯು ಇದನ್ನು ಸವಾಲಾಗಿ ಸ್ವೀಕರಿಸಿ ಗ್ರಾಮ ಮಟ್ಟದಲ್ಲಿ ಒಂದು ಬಾರಿ ಅದಾಲತ್ ಹಮ್ಮಿಕೊಂಡು ಅರ್ಹರಿಗೆ ಇ-ಕೆವೈಸಿ ಮಾಡಿಸಿದರೆ ಅನುಕೂಲ ಎಂಬ ಮಾತುಗಳು ಸಾರ್ವಜನಿಕರಿಂದ ವ್ಯಕ್ತವಾಗುತ್ತಿವೆ.

26-12-2022
Kannadaprbha Pg 06

26-12-2022
Hosadiganta Pg 01

ಕನ್ನಡಿಗರ ಸಾಧನೆಗೆ ಮನ್ ಕೀ ಬಾತ್‌ನಲ್ಲಿ ಮೆಚ್ಚುಗೆ

ರಾಜ್ಯದ ಅಡಕೆ ಉತ್ಪನ್ನಕ್ಕೆ ಶ್ಲಾಘನೆ

ಹೊಸದಿಲ್ಲಿ: ಮನ್ ಕೀ ಬಾತ್ ಸಂಚಿಕೆಯಲ್ಲಿ ಪ್ರಧಾನಿ ಮೋದಿ ನರೇಂದ್ರ ಮೋದಿಯವರು, ಮತ್ತೊಮ್ಮೆ ಕನ್ನಡಿಗರ ಸಾಧನೆಯನ್ನು ಶ್ಲಾಘಿಸಿದ್ದಾರೆ.

ಅಡಕೆ ನಾರಿನ ಉತ್ಪನ್ನಗಳನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದಿರುವ ಶಿವಮೊಗ್ಗದ ದಂಪತಿಯ ಸಾಧನೆಯನ್ನು ಉಲ್ಲೇಖಿಸಿದ ಪ್ರಧಾನಿ ಮೋದಿಯವರು, ಅವರ ಈ ಕಾರ್ಯ ಎಲ್ಲರಿಗೂ ಮಾದರಿಯಾದುದು ಎಂದು ಕೊಂಡಾಡಿದ್ದಾರೆ.

ಭಾರತದ ಸಾಂಪ್ರದಾಯಿಕ ಕೌಶಲಗಳ ಬಗ್ಗೆ ಮಾತನಾಡುವ ವೇಳೆ ಕರ್ನಾಟಕದ ಶಿವಮೊಗ್ಗದ ದಂಪತಿ ಸುರೇಶ್ ಹಾಗೂ ಅವರ ಪತ್ನಿ ಮೈಥಿಲಿಯವರ ಪ್ರಯತ್ನವನ್ನು ಉಲ್ಲೇಖಿಸಿದ ಮೋದಿಯವರು, ಅಡಕೆಯ ನಾರಿನಿಂದ ಅನೇಕ ಉತ್ಪನ್ನಗಳನ್ನು ಇಂದು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿರುವ ಇವರ ಪ್ರಯತ್ನಗಳನ್ನು ಪ್ರಶಂಸಿದ್ದಾರೆ. ''ಅಡಕೆ ನಾರಿನಿಂದ ತಟ್ಟೆ, ಕೈಚೀಲಗಳಿಂದ ಹಿಡಿದು ಅನೇಕ ಅಲಂಕಾರಿಕ ವಸ್ತುಗಳನ್ನು ಇವರು ತಯಾರು ಮಾಡುತ್ತಿದ್ದಾರೆ. ಇವರು ಉತ್ಪಾದಿಸಿದ ಚಪ್ಪಲಿಗಳನ್ನು ಜನರು ನೆಚ್ಚಿಕೊಂಡಿದ್ದಾರೆ. ಇಂದು ಅವರ ಉತ್ಪನ್ನಗಳನ್ನು ಲಂಡನ್ ಮತ್ತು ಯುರೋಪಿನ ಇತರ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಇದು ನಮ್ಮ ನೈಸರ್ಗಿಕ ಸಂಪನ್ಮೂಲಗಳು ಮತ್ತು ಸಾಂಪ್ರದಾಯಿಕ ಕೌಶಲಗಳ ಗುಣಮಟ್ಟಕ್ಕೆ ಹಿಡಿದ ಕೈಗನ್ನಡಿಯಿದ್ದಂತೆ.



ಗದಗಿನ ಕಾವೇಂಶ್ರೀಯನ್ನು ಪ್ರಶಂಸಿಸಿದ ಪ್ರಧಾನಿ ಮೋದಿ

ಹೊಸದಿಲ್ಲಿ: ಕಲಾ ಸಂಸ್ಕೃತಿ ಪೋಷಿಸಲು ಗದಗ ಜಿಲ್ಲೆಯ ಕಾವೇಂಶ್ರೀ ಕೈಗೊಂಡ ಕಾರ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಈ ವರ್ಷದ ಕೊನೆಯ ಮನ್ ಕೀ ಬಾತ್ ಪ್ರಸಾರದಲ್ಲಿ ಮಾತನಾಡಿದ ಮೋದಿ, ಗದಗ ಮೂಲದ ಹೋಟೆಲ್ ಉದ್ಯಮಿ ಕಾವೇಂಶ್ರೀ(ಕಾಳಮಂಜೆ ವೆಂಕಟಗಿರಿಯಪ್ಪ ಶ್ರೀನಿವಾಸ) ಅವರು ಸಂಸ್ಕೃತಿ ಉಳಿಸಿ, ಬೆಳೆಸಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದಾರೆ ಎಂದು ಮೋದಿ ಹೇಳಿದ್ದಾರೆ.